
ಕವಿತೆ



ಬಿ.ಆರ್. ಲಕ್ಷ್ಮಣರಾವ್

ಕಲೆ: ಎಸ್.ವಿ. ಹೂಗಾರ್



## ಮೈಲಿಗೆ

ಮರೆತು ಬಂದೆ ಪಾರ್ಕಿನಲ್ಲಿ
ಪ್ರೀತಿಯ ಕರವಸ್ತ್ರ,
ಕಸೂತಿ ಹಾಕಿ, ಸೀತೆ ನನಗೆ
ಕೊಟ್ಟಿದ್ದ ಕರವಸ್ತ್ರ,

ಮರುದಿನ ನೆನಪಾಯಿತು.

ಹೋಗಿ ನೋಡಿದರೆ ಅಲ್ಲೇ
ಬೆಂಚಿನ ಮೇಲಿತ್ತು,
ಒದ್ದೆಮುದ್ದೆಯಾಗಿ,
ಮೈ ಮುದುರಿಕೊಂಡು.

ಮನೆಗೆ ತಂದು, ಸೋಪು ಹಾಕಿ
ತೊಳೆದೆ ತಿಕ್ಕಿತಿಕ್ಕಿ
(ಯಾರ್ಯಾರು ಮುಟ್ಟಿದ್ದೋ!)
ಕಳೆಯಲು ಮೈಲಿಗೆ.

ಒಣಗಿಸಿ, ಇಸ್ತ್ರೀ ಮಾಡಿ,
ಕಪಾಟಿನಲ್ಲಿಟ್ಟೆ,
(ಭದ್ರವಾಗಿ)
ಮತ್ತೆಂದೂ ಬಳಸದೆ.

## ತೀರ್ಥ

ಕೊತ ಕೊತ ಕುದ್ದ ಪ್ರೀತಿ
ಈಗ ಕಾವಾರಿದೆ.
ಅದರೊಳಗಿದ್ದ ಏನೆಲ್ಲ ಜೀವಾಣುಗಳೂ,
ಲವಣಾಂಶಗಳೂ
ನಿರ್ನಾಮಗೊಂಡಿವೆ
(ಜೊತೆಗೆ ರುಚಿಯೂ)

ಇದೀಗ ನಿರ್ಗುಣ ಪರಿಶುದ್ಧ
ನಿರಪಾಯಕಾರಿ
ತೀರ್ಥ.

ಪ್ಲೆಟಾನಿಕ್ ಪ್ರೀತಿಗಾಗಿ
ಹಾ... ತೊರೆದ ಗೆಳತಿಯೇ,
ಬಾ,
ಸ್ವೀಕರಿಸಿ ಧನ್ಯಳಾಗು.